ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು	:	ಶ್ರೀ ಸಿದ್ದು ಸವದಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1740
ಉತ್ತರಿಸಬೇಕಾದ ದಿನಾಂಕ	:	12.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2019-20 ಮತ್ತು 2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ರೈತರ ಸಾಲಮನ್ನಾ ಮಾಡಲಾಗಿದೆ:	2018ನೇ ಸಾಲಿನ ಸಹಕಾರ ಸಂಘಗಳ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಡಿಯಲ್ಲಿ 2019-20ನೇ ಸಾಲಿನಲ್ಲಿ 8,85,661 ರೈತರಿಗೆ ರೂ.4333.27 ಕೋಟಿಗಳನ್ನು ಮತ್ತು 2020-21ನೇ ಸಾಲಿನಲ್ಲಿ 47,759 ರೈತರಿಗೆ ರೂ.258.10 ಕೋಟಿಗಳ ಸಾಲ ಮನ್ನಾ ಮಾಡಿ ಅನುದಾನ ಬಿಡುಗಡೆ ಮಾಡಲಾಗಿದೆ. 57,229 ರೈತರಿಗೆ ರೂ.295.14 ಕೋಟಿಗಳ ಅನುದಾನ ಬಿಡುಗಡೆ ಮಾಡಲು ಬಾಕಿ ಇರುತ್ತದೆ.
ಆ)	ಮನ್ನಾ ಮಾಡಲಾದ ಹಣವನ್ನು ರೈತರ ಖಾತೆಗಳಿಗೆ ಯಾವಾಗ ಜಮೆ ಮಾಡಲಾಗಿದೆ; (ಪೂರ್ಣ ಮಾಹಿತಿ ನೀಡುವುದು)	2019-20ನೇ ಸಾಲಿನಲ್ಲಿ 8,85,661 ರೈತರಿಗೆ ರೂ.4333.27 ಕೋಟಿ ಮತ್ತು 2020-21 47,759 ರೈತರಿಗೆ ರೂ.258.10 ಕೋಟಿಗಳ ಸಾಲ ಮನ್ನಾ ಅನುದಾನವನ್ನು ರೈತರ ಉಳಿತಾಯ ಖಾತೆಗಳಿಗೆ ಬಿಡುಗಡೆ ಮಾಡಲಾಗಿದೆ. ದಿನಾಂಕವಾರು ಬಿಡುಗಡೆ ಮಾಡಿದ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

(ರೂ.ಕೋಟಿಗಳಲ್ಲಿ)

2019-20			2020-21		
ದಿನಾಂಕ	ರೈತರ ಸಂಖ್ಯೆ	ಸಾಲ ಮನ್ನಾ ಮೊತ್ತ	ದಿನಾಂಕ	ರೈತರ ಸಂಖ್ಯೆ	ಸಾಲ ಮನ್ನಾ ಮೊತ್ತ
22/05/2019	93,559	386.67	15/06/2020	32,122	161.62
31/05/2019	3,18,395	1350.76	19/08/2020	7,323	36.10
12/09/2019	1,62,218	782.30	10/02/2020		5.37*
18/09/2019	55,290	288.92	20/11/2020	8,314	55.01
20/09/2019	56,838	387.54			
24/09/2019	72,723	461.04			
30/10/2019	26,051	129.89			
04/11/2019	90,001	495.26			
30/12/2019	5,465	27.54			
31/01/2020	5,121	23.35			
ಒಟ್ಟು	**8,85,661**	**4,333.27**		**47,759**	**258.10**

* ಫಲಾನುಭವಿಗಳಿಗೆ ಮೊದಲು ಭಾಗಶಃ ಸಾಲ ಮನ್ನಾ ನೀಡಿ ನಂತರ ಪೂರ್ಣ ಮನ್ನಾ ನೀಡಲಾಗಿದೆ.

ಇ)	ಸದರಿ ವರ್ಷಗಳಲ್ಲಿ ಸಾಲಮನ್ನಾದಿಂದ ವಂಚಿತರಾದ ರೈತರ ಸಂಖ್ಯೆ ಎಷ್ಟು; ಅವರುಗಳಿಗೆ ಸಾಲಮನ್ನಾ ಮಾಡದಿರಲು ಕಾರಣಗಳೇನು: ಯಾವಾಗ ಸಾಲಮನ್ನಾ ಮಾಡಲಾಗುವುದು;	ಸಾಲ ಮನ್ನಾ ಯೋಜನೆಯಲ್ಲಿ ಎಲ್ಲಾ ಷರತ್ತುಗಳನ್ನು ಪೂರೈಸಿ ಅರ್ಹತೆ ಹೊಂದಿರುವ 57,229 ರೈತರಿಗೆ ಸಾಲ ಮನ್ನಾ ಅನುದಾನ ಬಿಡುಗಡೆ ಮಾಡಲು ಮತ್ತು ಇನ್ನೂ ಅರ್ಹತೆ ಹೊಂದದೇ ಇರುವ 62,056 ರೈತರಿಗೆ ಅರ್ಹತೆ ಗುರುತಿಸಲು ಬಾಕಿ ಇರುತ್ತದೆ. ಇದುವರೆಗೆ ಎಲ್ಲಾ ಷರತ್ತು ಹಾಗೂ ಮಾನದಂಡಗಳನ್ನು ಪೂರೈಸಿ ಸದ್ಯ ಅರ್ಹತೆ ಹೊಂದಿರುವ 57,229 ರೈತರಿಗೆ ರೂ.295.14 ಕೋಟಿಗಳನ್ನು ಬಿಡುಗಡೆ ಮಾಡಲು ಸರ್ಕಾರ ದಿ:06.03.2021 ರಂದು ಆದೇಶ ಹೊರಡಿಸಿರುತ್ತದೆ. ಖಜಾನೆಗೆ ಬಿಲ್ಲು ಸಲ್ಲಿಸಲಾಗಿದ್ದು, ಖಜಾನೆಯಿಂದ ಅನುದಾನ ಬಿಡುಗಡೆಯಾದ ಕೂಡಲೇ ರೈತರ ಖಾತೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುವುದು. ಇನ್ನೂ ಅರ್ಹತೆ ಹೊಂದದೇ ಇರುವ 62,056 ರೈತರು ನೀಡಿದ ಆಧಾರ್, ಪಡಿತರ ಚೀಟಿ ಮತ್ತು ಭೂಮಿ ದಾಖಲೆಗಳು ಸಂಬಂಧಿಸಿದ ಪ್ರಾಧಿಕಾರದ ದತ್ತಾಂಶಕ್ಕೆ ತಾಳೆಯಾಗದೇ ಇರುವುದರಿಂದ ಅರ್ಹತೆ ಗುರುತಿಸಲು ಬಾಕಿ ಇರುತ್ತದೆ.
ಈ)	ವಿಳಂಬಕ್ಕೆ ಕಾರಣಗಳೇನು?	ಸಾಲ ಮನ್ನಾ ಯೋಜನೆಯಲ್ಲಿ ಅರ್ಹ ರೈತರನ್ನು ಗುರುತಿಸಲು ವಿಳಂಬವಾಗಿರುವುದಕ್ಕೆ ಕಾರಣಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ ಸಂ	ಅರ್ಹತೆ ಗುರುತಿಸಲು ಬಾಕಿ ಇರುವ ಕಾರಣಗಳು	ಅರ್ಹತೆ ಗುರುತಿಸಲು ಬಾಕಿ ರೈತರ ಸಂಖ್ಯೆ
1	ದಾಖಲೆಗಳು ಸರಿ ಇದ್ದು, ಸಾಲ ಮನ್ನಾ ವಿಶೇಷ ಕೋಶದಿಂದ ಹಸಿರುವ ಪಟ್ಟಿ ನೀಡಲು ಬಾಕಿ ಇರುತ್ತದೆ.	14,115
2	ಸಹಕಾರ ಸಂಘಗಳು ರೈತರ ಮಾಹಿತಿಯನ್ನು ತಪ್ಪಾಗಿ ಅಳವಡಿಸಿದ್ದು, ಅವುಗಳನ್ನು ಸರಿಪಡಿಸುವ ವಿವರ	13,020
3	ಪಡಿತರ ಚೀಟಿಗಳು ಹೊಸದಾಗಿ ಮಾಡಿಸಿದ್ದು, ನಂತರದಲ್ಲಿ ಸಣ್ಣ ಮಟ್ಟ ಬದಲಾವಣೆಯಾಗಿರುವುದರಿಂದ ಸಾಲ ಮನ್ನಾ ವಿಶೇಷ ಕೋಶದಿಂದ ಹಸಿರು ಪಟ್ಟಿ ನೀಡಲು ಬಾಕಿ ಇರುವ ರೈತರ ಸಂಖ್ಯೆ	20,287
4	ರೂ.1.00 ಲಕ್ಷಗಳಿಗಿಂತ ಹೆಚ್ಚಿನ ಸಾಲವನ್ನು ಸರ್ಕಾರ ಕಾಲಾವಕಾಶ ನೀಡಿದ ಅವಧಿಯಲ್ಲಿ ಮರುಪಾವತಿಸಿದ್ದು, ಹಸಿರು ಪಟ್ಟಿ ನೀಡಲು ಬಾಕಿ ಇರುವ ರೈತರ ಸಂಖ್ಯೆ	4,500
5	ಆಧಾರ್, ಪಡಿತರ ಚೀಟಿ, ಆರ್‌ಟಿಸಿ ದಾಖಲೆಗಳು ಸರಿಯಿಲ್ಲದೇ ಇರುವ ಮತ್ತು ಅಧಿಕಾರಿಗಳು ಪರಿಶೀಲಿಸಲು ಬಾಕಿ ಇರುವ ರೈತರ ಸಂಖ್ಯೆ	10,134
	ಒಟ್ಟು	**62,056**

ಸಂಖ್ಯೆ: ಸಿಒ 73 ಸಿಎಲ್‌ಎಸ್ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1764

ಉತ್ತರಿಸಬೇಕಾದ ದಿನಾಂಕ : 12.03.2021

ಕ್ರಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಕೇಂದ್ರ ಸಹಕಾರಿ ಬ್ಯಾಂಕ್ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ವ್ಯವಹಾರವನ್ನು ಒಂದೇ ತಂತ್ರಾಂಶದಡಿ ನಿರ್ವಹಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಒಂದೇ ಬಗೆಯ ತಂತ್ರಾಂಶದಡಿ ಗಣಕೀಕರಣಗೊಳಿಸಿ ಅವುಗಳ ವ್ಯವಹಾರವನ್ನು ಡಿಸಿಸಿ ಬ್ಯಾಂಕ್‌ಗಳಲ್ಲಿನ ತಂತ್ರಾಂಶಕ್ಕೆ ಅಂತರ ಸಂಪರ್ಕ ಸಾಧನ (Interface) ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ 2021-22ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡಂತೆ ಘೋಷಣೆ ಮಾಡಲಾಗಿದೆ. ರಾಜ್ಯದಲ್ಲಿರುವ 5,500 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ರೂ.198.00 ಕೋಟಿ ವೆಚ್ಚದಲ್ಲಿ ಗಣಕೀಕರಣಗೊಳಿಸಲಾಗುವುದು.
ಆ)	ಹಾಗಿದ್ದಲ್ಲಿ, ಈ 3 ಹಂತದ ಸಹಕಾರ ಬ್ಯಾಂಕ್‌ಗಳ ತಂತ್ರಾಂಶ ಒಂದೇ ಸೂರಿನಡಿ ತರುವುದರಿಂದ ರೈತರು, ಗ್ರಾಹಕರು ಹಾಗೂ ಸಹಕಾರ ಬ್ಯಾಂಕ್‌ಗಳ ನೌಕರರಿಗೆ ಇರುವ ಲಾಭಗಳೇನು;	ಈ 3 ಹಂತದ ಸಹಕಾರ ಬ್ಯಾಂಕ್‌ಗಳ ತಂತ್ರಾಂಶ ಒಂದೇ ಸೂರಿನಡಿ ತರುವುದರಿಂದ ರೈತರು, ಗ್ರಾಹಕರು ಹಾಗೂ ಸಹಕಾರ ಬ್ಯಾಂಕ್‌ಗಳ ನೌಕರರಿಗೆ ಈ ಕೆಳಕಂಡ ಲಾಭಗಳಿರುತ್ತವೆ. 1. ರೈತರಿಗೆ ಸಕಾಲದಲ್ಲಿ ತ್ವರಿತವಾಗಿ ಸಾಲ ವಿತರಣೆ ಮಾಡಬಹುದಾಗಿದೆ. 2. ರೈತರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಬಡ್ಡಿ ಸಹಾಯಧನವನ್ನು ತ್ವರಿತವಾಗಿ ವಿತರಿಸಬಹುದಾಗಿದೆ. 3. ಗ್ರಾಹಕರು ನೇರವಾಗಿ ತಂತ್ರಾಶದ ಮೂಲಕ RTGS, NEFT ಹಾಗೂ ATM ಮೂಲಕ ವ್ಯವಹರಿಸಬಹುದಾಗಿದೆ. 4. ಸಹಕಾರ ಬ್ಯಾಂಕ್‌ಗಳ ನೌಕರರಿಗೆ ವಿವಿಧ ಸಹಕಾರ ಸಂಘಗಳ ಜಮಾ-ಖರ್ಚು, ಅಡಾವೆ ಪತ್ರಿಕೆ, ಲಾಭ-ನಷ್ಟದ ಮಾಹಿತಿ ತ್ವರಿತವಾಗಿ ಪಡೆಯಬಹುದಾಗಿದೆ.

ಇ)	ಹಾಗಿದ್ದಲ್ಲಿ, ಸರ್ಕಾರ ಈ ನಿರ್ಧಾರದಿಂದ 3 ಹಂತದ ಸಹಕಾರ ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿರುವ ರೈತರು ಹಾಗೂ ಗ್ರಾಹಕರು ರಾಜ್ಯದ ಎಲ್ಲಿ ಬೇಕಾದರು ವ್ಯವಹಾರ ಮಾಡಬಹುದೇ?	ರಾಜ್ಯದ ಎಲ್ಲಾ ಡಿಸಿಸಿ ಬ್ಯಾಂಕ್‌ಗಳು ಹಾಗೂ ಅಪೆಕ್ಸ್ ಬ್ಯಾಂಕ್ ಈಗಾಗಲೇ ಕೋರ್ ಬ್ಯಾಂಕಿಂಗ್ ಪ್ಲಾಟ್‌ಫಾರಂನಲ್ಲಿರುವುದರಿಂದ RTGS, NEFT ಹಾಗೂ ATM ಮೂಲಕ ವ್ಯವಹಾರ ಮಾಡಬಹುದಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ಪ್ಯಾಕ್ಸ್)ಗಳಿಗೆ ಬ್ಯಾಂಕಿಂಗ್ ಕಾಯ್ದೆಯಡಿ ಪರವಾನಗಿ ಇಲ್ಲದಿರುವುದರಿಂದ ಇಲ್ಲಿನ ಗ್ರಾಹಕರು ಇನ್ನೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ವ್ಯವಹಾರ ಮಾಡಲು ಸಾಧ್ಯವಿರುವುದಿಲ್ಲ.

ಸಂಖ್ಯೆ: ಸಿಒ 74 ಸಿಎಲ್‌ಎಸ್ 2021

(ಎಸ್. ಟಿ ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1776
ಸದಸ್ಯರ ಹೆಸರು	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್
ಉತ್ತರಿಸಬೇಕಾದ ದಿನಾಂಕ	12.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಭೀಮಾ ನದಿ ತೀರದ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ ಅಕ್ರಮ ಮರಳು ದಂದೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ವಿಜಯಪುರ ಜಿಲ್ಲೆ, ಇಂಡಿ ತಾಲ್ಲೂಕು ಭೀಮಾ ನದಿ ಪಾತ್ರದ ವ್ಯಾಪ್ತಿಯಲ್ಲಿ ಯಾವುದೇ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ ಚಟುವಟಿಕೆಗಳು ನಡೆಯುತ್ತಿರುವುದು ಕಂಡು ಬಂದಿರುವುದಿಲ್ಲ.
ಆ)	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು;	ಜಿಲ್ಲಾ ಹಾಗೂ ತಾಲೂಕು ಮರಳು ಸಮಿತಿಯ ಸದಸ್ಯ ಇಲಾಖೆಗಳ ಸಹಯೋಗದೊಂದಿಗೆ ಮತ್ತು ಸ್ಥಳೀಯರ ಸಹಕಾರದೊಂದಿಗೆ ಭೀಮಾ ನದಿ ಪಾತ್ರದಲ್ಲಿ ಯಾವುದೇ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳು ನಡೆಯದಂತೆ ಕ್ರಮ ವಹಿಸಲಾಗಿರುತ್ತದೆ.
ಇ)	ಸದರಿ ಪ್ರದೇಶದಲ್ಲಿ ಮರಳು ಪ್ರದೇಶಗಳನ್ನು ಗುರುತಿಸಿ, ಹರಾಜು ಮಾಡಲಾಗಿದೆಯೇ ಹರಾಜು ಮಾಡಿದ್ದಲ್ಲಿ ಕಾರಣಗಳೇನು; ಯಾವಾಗ ಹರಾಜು ಪ್ರಕ್ರಿಯೆ ಪ್ರಾರಂಭಿಸಲಾಗುವುದು;	ಇಂಡಿ ತಾಲ್ಲೂಕಿನ ಭೀಮಾ ನದಿ ಪಾತ್ರದಲ್ಲಿ ಮರಳು ಗಣಿಗಾರಿಕೆ / ಸಾಗಾಣಿಕೆಗೆ ಮಾನ್ಯ ಹಸಿರು ಪೀಠ, ನವದೆಹಲಿ ಇವರಿಂದ ತಡೆಯಾಜ್ಞೆ ಇರುವುದರಿಂದ ಯಾವುದೇ ಮರಳು ಬ್ಲಾಕ್ ಗಳನ್ನು ಗುರುತಿಸಿರುವುದಿಲ್ಲ ಹಾಗೂ ಹರಾಜು ಪ್ರಕ್ರಿಯೆ ನಡೆದಿರುವುದಿಲ್ಲ. ಮಾನ್ಯ ಹಸಿರು ಪೀಠದಲ್ಲಿ ತಡೆಯಾಜ್ಞೆ ತೆರವುಗೊಂಡ ನಂತರ ಹೊಸ ಮರಳು ನೀತಿ, 2020 ರಂತೆ ಸದರಿ ನದಿ ಪಾತ್ರದ ಮರಳನ್ನು ವಿಲೇಪಡಿಸಲು ಕ್ರಮವಹಿಸಲಾಗುವುದು.
ಈ)	ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್ (ಎನ್.ಜಿ.ಟಿ) ನಲ್ಲಿರುವ ಪ್ರಕರಣವು ಇತ್ಯರ್ಥವಾಗಿದೆಯೇ; ಅಥವಾ ಇಲ್ಲವೇ; ಪ್ರಸ್ತುತ ಯಾವ ಹಂತದಲ್ಲಿದೆ; (ವಿವರ ಒದಗಿಸುವುದು)	ಪ್ರಸ್ತುತ ಮಾನ್ಯ ಹಸಿರು ಪೀಠದಲ್ಲಿ ದಾಖಲಾಗಿರುವ ಪ್ರಕರಣವು ಇತ್ಯರ್ಥವಾಗಿರುವುದಿಲ್ಲ. ಸದರಿ ನದಿ ಪಾತ್ರದಲ್ಲಿ ಮರಳು ಗಣಿಗಾರಿಕೆಗೆ ಇರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ.

--2

ಉ)	ಸಾರ್ವಜನಿಕರು ಹಾಗೂ ಸರ್ಕಾರದ ಕಾಮಗಾರಿಗಳನ್ನು ಕೈಗೊಳ್ಳಲು ಎಂ-ಸ್ಯಾಂಡ್ ಅನ್ನು ಬಳಕೆ ಮಾಡಲು ಸರ್ಕಾರವು ಯಾವ ಉತ್ತೇಜನ ಕ್ರಮಗಳನ್ನು ಕೈಗೊಂಡಿದೆ? (ವಿವರ ಒದಗಿಸುವುದು)	ನದಿ ಮರಳಿಗೆ ಪರ್ಯಾಯವಾಗಿ ಎಂ-ಸ್ಯಾಂಡ್ ಉತ್ಪಾದನೆ ಮತ್ತು ಬಳಕೆಯನ್ನು ಪ್ರೋತ್ಸಾಹಿಸುತ್ತಿದ್ದು, ಈ ಕೆಳಗಿನಂತೆ ಕ್ರಮ ವಹಿಸಲಾಗಿರುತ್ತದೆ. • ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 15 ರಂತೆ ಎಂ-ಸ್ಯಾಂಡ್ ಘಟಕ ಸ್ಥಾಪಿಸುವವರಿಗೆ ಗರಿಷ್ಠ 50-00 ಎಕರೆ ವಿಸ್ತೀರ್ಣದವರೆಗೆ ಕಲ್ಲುಗಣಿ ಗುತ್ತಿಗೆಯನ್ನು ಮಂಜೂರು ಮಾಡಲು ನಿಯಮಾವಳಿ ರೂಪಿಸಲಾಗಿದೆ. • ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 8-A ರಂತೆ ಎಂ-ಸ್ಯಾಂಡ್ ತಯಾರಿಸುವ ಉದ್ದೇಶಕ್ಕಾಗಿ 30 ವರ್ಷಗಳ ಅವಧಿಗೆ ಕಲ್ಲುಗಣಿ ಗುತ್ತಿಗೆ ಮಂಜೂರು ಮಾಡಲು ನಿಯಮಾವಳಿ ರೂಪಿಸಲಾಗಿದೆ. • ಎಂ-ಸ್ಯಾಂಡ್ ಬಳಕೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಇಲಾಖೆಯಿಂದ ಆಕಾಶವಾಣಿ ಮೂಲಕ ಜಿಂಗಲ್ಸ್‌ಗಳ ಪ್ರಸಾರ, ಸಂದರ್ಶನ ಕಾರ್ಯಕ್ರಮ, ಫೋನ್ ಇನ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ. • ಇದಲ್ಲದೆ ಪೋಸ್ಟರ್ಸ್, ಕರಪತ್ರಗಳನ್ನು ಮುದ್ರಿಸಿ ಎಂ-ಸ್ಯಾಂಡ್ ಉಪಯೋಗಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿರುತ್ತದೆ. • ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರಲ್ಲಿ ನಿಯಮ 31-ZC ಎಂಬ ವಿಶೇಷ ನಿಯಮವನ್ನು ಜಾರಿಗೆ ತಂದಿದ್ದು, ದಿನಾಂಕ 12.08.2016 ರ ಪೂರ್ವದಲ್ಲಿ ಎಂ-ಸ್ಯಾಂಡ್ ತಯಾರಿಕಾ ಘಟಕದವರಿಗೆ ಎಂ-ಸ್ಯಾಂಡ್ ಉತ್ಪಾದನೆ ದ್ವಿಗುಣಗೊಳಿಸಲು ಹರಾಜು ರಹಿತವಾಗಿ ಕಲ್ಲುಗಣಿಗುತ್ತಿಗೆ ಮಂಜೂರಾತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.

ಸಂಖ್ಯೆ ಸಿಐ 148 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1914
ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಉತ್ತರಿಸುವ ದಿನಾಂಕ : 12.03.2021.
ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಜಿಲ್ಲೆ ಹಾಗೂ ವೃಂದವಾರು ಮಾಹಿತಿ ಒದಗಿಸುವುದು)</td><td>ರಾಜ್ಯದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗವು ಸೇರಿ ಒಟ್ಟು 284 ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಜಿಲ್ಲೆ ಮತ್ತು ಕೇಂದ್ರ ಕಚೇರಿಯಲ್ಲಿ ವಿವಿಧ ವೃಂದಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಮಾಹಿತಿ ಕೆಳಕಂಡಂತಿದೆ.

<table>
<tr><th>ಕ್ರ. ಸಂ.</th><th>ವೃಂದ</th><th>ಸಂಖ್ಯಾ ಬಲ</th></tr>
<tr><td>1.</td><td>ಆಯುಕ್ತರು</td><td>1</td></tr>
<tr><td>2.</td><td>ಜಂಟಿ ನಿರ್ದೇಶಕರು</td><td>1</td></tr>
<tr><td>3.</td><td>ಹಿರಿಯ ಸಹಾಯಕ ನಿರ್ದೇಶಕರು</td><td>24</td></tr>
<tr><td>4.</td><td>ಸಹಾಯಕ ನಿರ್ದೇಶಕರು</td><td>21</td></tr>
<tr><td>5.</td><td>ಸಹಾಯಕ ಆಡಳಿತಾಧಿಕಾರಿ</td><td>2</td></tr>
<tr><td>6.</td><td>ತಾಂತ್ರಿಕ ಅಧಿಕಾರಿ (ಚಲನಚಿತ್ರ)</td><td>1</td></tr>
<tr><td>7.</td><td>ಮುಖ್ಯ ವರದಿಗಾರರು</td><td>1</td></tr>
<tr><td>8.</td><td>ಸಹಾಯಕ ನಿರ್ಮಾಪಕ</td><td>1</td></tr>
<tr><td>9.</td><td>ವಾರ್ತಾ ಸಹಾಯಕ</td><td>24</td></tr>
<tr><td>10.</td><td>ಸ್ವಾಗತಕಾರ ಹಾಗೂ ಗ್ರಂಥಪಾಲಕರು</td><td>10</td></tr>
<tr><td>11.</td><td>ಅಧೀಕ್ಷಕರು</td><td>10</td></tr>
<tr><td>12.</td><td>ಲೆಕ್ಕಾಧೀಕ್ಷಕರು</td><td>1</td></tr>
<tr><td>13.</td><td>ಪ್ರಥಮದರ್ಜೆ ಸಹಾಯಕರು</td><td>37</td></tr>
<tr><td>14.</td><td>ದ್ವಿತೀಯದರ್ಜೆ ಸಹಾಯಕರು</td><td>14</td></tr>
<tr><td>15.</td><td>ಶೀಘ್ರಲಿಪಿಗಾರರು</td><td>7</td></tr>
<tr><td>16.</td><td>ಬೆರಳಚ್ಚುಗಾರರು</td><td>6</td></tr>
<tr><td>17.</td><td>ಹಿರಿಯ ವಾಹನ ಚಾಲಕರು</td><td>8</td></tr>
<tr><td>18.</td><td>ವಾಹನ ಚಾಲಕರು</td><td>43</td></tr>
<tr><td>19.</td><td>ಸಿನಿಚಾಲಕರು</td><td>10</td></tr>
<tr><td>20.</td><td>ಛಾಯಾಗ್ರಾಹಕರು</td><td>2</td></tr>
<tr><td>21.</td><td>ಸೇವಕರು</td><td>60</td></tr>
</table></td></tr>
<tr><td>(ಆ)</td><td>ಈ ಇಲಾಖೆಯಲ್ಲಿ ನಿವೃತ್ತಿ ಮತ್ತು ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ನಿವೃತ್ತಿ ಮತ್ತು ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ರಾಜ್ಯದಲ್ಲಿ ಕರೋನಾ ಸಾಂಕ್ರಾಮಿಕ ರೋಗ ಇರುವುದರಿಂದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿರ್ಬಂಧಿಸಲಾಗಿದೆ. ರಾಜ್ಯದಲ್ಲಿ ಸಂಪನ್ಮೂಲ ಕ್ರೂಢೀಕರಿಸಿದ ನಂತರ ಖಾಲಿ ಇರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು.</td></tr>
</table>

2....

(ಇ)	ಬಂದಿದ್ದಲ್ಲಿ, ಸದರಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಈ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ರಾಜ್ಯದಲ್ಲಿ ಕರೋನಾ ಸಾಂಕ್ರಾಮಿಕ ರೋಗ ಇರುವುದರಿಂದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿರ್ಬಂಧಿಸಲಾಗಿದೆ. ರಾಜ್ಯದಲ್ಲಿ ಸಂಪನ್ಮೂಲ ಕ್ರೂಢೀಕರಿಸಿದ ನಂತರ ಖಾಲಿ ಇರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು.
(ಈ)	ಬಂದಿದಲ್ಲಿ, ಸದರಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ರಾಜ್ಯದಲ್ಲಿ ಕರೋನಾ ಸಾಂಕ್ರಾಮಿಕ ರೋಗ ಇರುವುದರಿಂದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿರ್ಬಂಧಿಸಲಾಗಿದೆ. ರಾಜ್ಯದಲ್ಲಿ ಸಂಪನ್ಮೂಲ ಕ್ರೂಢೀಕರಿಸಿದ ನಂತರ ಖಾಲಿ ಇರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು.

KCI-PIP/63/2021-INFO-KC-SEC

(ಸಿ.ಸಿ.ಪಾಟೀಲ್)
ಮಾನ್ಯ ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1915
ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಉತ್ತರಿಸುವ ದಿನಾಂಕ	:	12/03/2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
(ಅ)	ಬೀದರ್ ಜಿಲ್ಲೆಯಲ್ಲಿ ವಿಧಾನಸಭಾ ಕ್ಷೇತ್ರವಾರು ಇರುವ ಪಟ್ಟಣ ಪಂಚಾಯಿತಿಗಳು ಯಾವುವು; ಹಾಗೂ ಹೊಸ ಪಟ್ಟಣ ಪಂಚಾಯಿತಿಗಳ ರಚನೆಗೆ ಪಾಲಿಸಲಾಗುತ್ತಿರುವ ಮಾನದಂಡಗಳೇನು;	ಬೀದರ್ ಜಿಲ್ಲೆಯಲ್ಲಿ ಔರಾದ ವಿಧಾನಸಭಾ ಕ್ಷೇತ್ರದಲ್ಲಿ 01 ಪಟ್ಟಣ ಪಂಚಾಯಿತಿ ಇರುತ್ತದೆ. ಇನ್ನುಳಿದ ವಿಧಾನಸಭಾ ಕ್ಷೇತ್ರಗಳಾದ ಬೀದರ್, ಬೀದರ್(ದ), ಬಸವಕಲ್ಯಾಣ, ಭಾಲ್ಕಿ ಹಾಗೂ ಹುಮನಾಬಾದ ಕ್ಷೇತ್ರಗಳಲ್ಲಿ ಪಟ್ಟಣ ಪಂಚಾಯಿತಿಗಳು ಇರುವುದಿಲ್ಲ. ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪುರಸಭೆ ಅಧಿನಿಯಮ 1964 ಕಲಂ 349 ರನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. • ಅಂತಹ ಪ್ರದೇಶದ ಜನಸಂಖ್ಯೆಯು 10,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000ಕ್ಕೆ ಹೆಚ್ಚಿಲ್ಲದಂತಿರಬೇಕು. • ಅಂತಹ ಪ್ರದೇಶದ ಜನಸಂಖ್ಯೆಯು ಜನಸಾಂದ್ರತೆಯು ಆ ಪ್ರದೇಶದ ಒಂದು ಚ.ಕಿ.ಮೀ ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು. • ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ. 50 ಕ್ಕಿಂತ ಕಡಿಮೆ ಇಲ್ಲದಿರುವುದು. ಮುಂದುವರೆದು, ದಿ:19.03.2015 ರ ಸಚಿವ ಸಂಪುಟ ಸಭೆಯ ನಿರ್ಣಯದಂತೆ 15,000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗಿರುತ್ತದೆ.

(ಆ)	ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಜನ ಸಂಖ್ಯೆಗೆ ಅನುಗುಣವಾಗಿ ಎಷ್ಟು ಗ್ರಾಮಗಳನ್ನು ಪಟ್ಟಣ ಪಂಚಾಯಿತಿಯಾಗಿ ರಚನೆ ಮಾಡಬಹುದಾಗಿದೆ; (ಮಾಹಿತಿಯನ್ನು ಒದಗಿಸುವುದು)	ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಮನ್ನಾ-ಏ-ಖೇಳ್ಳಿ ಗ್ರಾಮವು 12039 ಹಾಗೂ ಕಮಠಾಣಾ ಗ್ರಾಮವು 11179 ಜನಸಂಖ್ಯೆ ಇರುತ್ತದೆ. ಆದರೆ ದಿ:19.03.2015ರ ಸಚಿವ ಸಂಪುಟದ ನಿರ್ಣಯದಂತೆ 15,000 ಸಾವಿರ ಜನಸಂಖ್ಯೆ ಹೊಂದಿಲ್ಲವಾದ್ದರಿಂದ ಪ್ರಸ್ತುತ ಹಂತದಲ್ಲಿ ಈ ಗ್ರಾಮಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ರಚನೆ ಮಾಡಲು ಅವಕಾಶವಿರುವುದಿಲ್ಲ.
(ಇ)	ಸದರಿ ಕ್ಷೇತ್ರದಲ್ಲಿ ಪಟ್ಟಣ ಪಂಚಾಯಿತಿಯಾಗಿ ರಚನೆ ಮಾಡಬಹುದಾದ ಗ್ರಾಮಗಳನ್ನು ಪಟ್ಟಣ ಪಂಚಾಯಿತಿಯಾಗಿ ಘೋಷಿಸದಿರಲು ಕಾರಣಗಳೇನು;	ಕೇಂದ್ರ ಜನಗಣತಿ ನಿರ್ದೇಶನಾಲಯದ ಸೂಚನೆಯನ್ವಯ ಸರ್ಕಾರದ ಆದೇಶ ಸಂಖ್ಯೆ: ಕಂಇ 18 ಎಲ್ ಆರ್ ಡಿ 2019, ದಿನಾಂಕ 18/09/2020 ರಲ್ಲಿ ದಿನಾಂಕ 01/01/2021 ರಿಂದ ಜನಗಣತಿ ಮುಕ್ತಾಯವಾಗುವವರೆಗೂ ಯಾವುದೇ ಆಡಳಿತಾತ್ಮಕ ಗಡಿಗಳನ್ನು ಬದಲಾವಣೆ ಮಾಡದಿರಲು ಆದೇಶ ಹೊರಡಿಸಲಾಗಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಪಟ್ಟಣ ಪಂಚಾಯಿತಿಯನ್ನಾಗಿ ಘೋಷಣೆ ಮಾಡಲು ಅವಕಾಶವಿರುವುದಿಲ್ಲ.
(ಈ)	ಹಾಗಿದ್ದಲ್ಲಿ, ಈ ಕ್ಷೇತ್ರದಲ್ಲಿ ಪಟ್ಟಣ ಪಂಚಾಯಿತಿ ರಚನೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	

ಸಂಖ್ಯೆ: ನಅಇ/37/ಎಲ್ಎಕ್ಯೂ/2021

(ಎನ್. ನಾಗರಾಜು ಎಂ ಟಿ ಬಿ)

ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1930
ಸದಸ್ಯರ ಹೆಸರು	ಶ್ರೀ ಈಶ್ವರ್ ಖಂಡ್ರೆ
ಉತ್ತರಿಸಬೇಕಾದ ದಿನಾಂಕ	12.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರ
ಅ)	ರಾಜ್ಯದಲ್ಲಿ ಮರಳು ನೀತಿ ಸರಿಯಾಗಿ ಪಾಲಿಸದ ಕಾರಣ, ಬಡ ಜನರಿಗೆ ಮನೆ ನಿರ್ಮಾಣ ಮಾಡಲು ಮತ್ತು ಇತರೆ ಮೂಲಭೂತ ಸೌಕರ್ಯಗಳಿಗೆ ಮರಳು ಸಿಗದಿರುವುದು ಮತ್ತು ಮರಳು ದುಬಾರಿ ಬೆಲೆಗೆ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಆ)	ಹಾಗಿದ್ದಲ್ಲಿ, ಮರಳು ಮಾಫಿಯಾ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;	ಸಾರ್ವಜನಿಕರಿಗೆ ಅಗತ್ಯವಿರುವ ಹಾಗೂ ನಿಯಮಿತ ದರದಲ್ಲಿ ಮರಳು ಪೂರೈಕೆಗಾಗಿ ದಿನಾಂಕ 05.05.2020 ರಂದು ಹೊಸ ಮರಳು ನೀತಿ, 2020 ನ್ನು ಜಾರಿಗೆ ತಂದಿದ್ದು, ಅದರ ಪ್ರಮುಖಾಂಶಗಳು ಕೆಳಕಂಡಂತಿವೆ; • I, II & III ನೇ ಶ್ರೇಣಿಯ ಹಳ್ಳ / ತೊರೆಗಳಲ್ಲಿ ಮತ್ತು ಕೆರೆಗಳಲ್ಲಿ ಲಭ್ಯವಿರುವ ಮರಳನ್ನು ತೆಗೆಯುವ ಮತ್ತು ವಿಲೇವಾರಿ ಮಾಡುವ ಸಂಪೂರ್ಣ ಹೊಣೆಗಾರಿಕೆಯನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ವಹಿಸಲಾಗಿರುತ್ತದೆ. • ಸದರಿ ಗ್ರಾಮ ಪಂಚಾಯಿತಿಗಳ ವತಿಯಿಂದ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ರೂ.300/- ಗಳ ದರವನ್ನು ನಿಗದಿಪಡಿಸಲಾಗಿದೆ. • IV, VI & V ನೇ ಶ್ರೇಣಿಯ ಹೊಳೆ / ನದಿಗಳಲ್ಲಿ ಲಭ್ಯವಿರುವ ಮರಳನ್ನು ಮತ್ತು ಅಣೆಕಟ್ಟು / ಜಲಾಶಯ / ಬ್ಯಾರೇಜ್‌ಗಳು ಮತ್ತು ಸದರಿ ಹಿನ್ನೀರಿನ ಪ್ರದೇಶಗಳಲ್ಲಿ ಲಭ್ಯವಿರುವ ಮರಳನ್ನು ತೆಗೆಯುವ ಮುಖಾಂತರ ದೊರೆತ ಮರಳನ್ನು
ಇ)	ಜನ ಸಾಮಾನ್ಯರಿಗೆ ಮರಳು ಸರಬರಾಜು ಮಾಡಲು ಸರ್ಕಾರ ಈಗಲಾದರೂ ಸರಿಯಾದ ವ್ಯವಸ್ಥೆ ಮಾಡುವುದೇ?	

		ಸರ್ಕಾರದ ಆದೇಶ ಸಂಖ್ಯೆ ಸಿಐ 344 ಎಂಎಂಎನ್ 2019, ದಿನಾಂಕ 18.05.2020ರಂತೆ ಸರ್ಕಾರಿ ಸ್ವಾಮದ ಸಂಸ್ಥೆಗಳಾದ ಮೆ॥ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಮತ್ತು ಮೆ॥ ಹಟ್ಟಿ ಚಿನ್ನದ ಗಣಿ ನಿಯಮಿತ ಇವರಿಗೆ ವಹಿಸಲಾಗಿರುತ್ತದೆ. • ಸದರಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ರೂ.700/-ಗಳ ದರವನ್ನು ನಿಗದಿಪಡಿಸಲಾಗಿರುತ್ತದೆ. • IV, VI & V ನೇ ಶ್ರೇಣಿಯ ಹೊಳೆ / ನದಿಗಳಲ್ಲಿ ಲಭ್ಯವಿರುವ ಮರಳನ್ನು ಮತ್ತು ಅಣೆಕಟ್ಟು / ಜಲಾಶಯ / ಬ್ಯಾರೇಜ್‌ಗಳು ಮತ್ತು ಸದರಿ ಹಿನ್ನೀರಿನ ಪ್ರದೇಶಗಳಲ್ಲಿ ಹೂಳು ತೆಗೆಯುವ ಮುಖಾಂತರ ದೊರೆತ ಮರಳನ್ನು ಆನ್‌ಲೈನ್ ಬುಕಿಂಗ್ ವ್ಯವಸ್ಥೆಯಡಿ ಸಾರ್ವಜನಿಕರಿಗೆ ಪೂರೈಸಲು ಅವಕಾಶ ಕಲ್ಪಿಸಲಾಗಿದೆ. • ಮೇಲ್ಕಂಡ ಕ್ರಮಗಳಂತೆ ಸಾರ್ವಜನಿಕರಿಗೆ ಮರಳು ಪೂರೈಕೆ ಮಾಡಲು ಕ್ರಮವಹಿಸಲಾಗಿದೆ.

ಸಂಖ್ಯೆ ಸಿಐ 160 ಎಂಎಂಎನ್ 2021

8/3

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1932
ಸದಸ್ಯರ ಹೆಸರು	:	ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	12-03-2021
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದ ಎಷ್ಟು ಜಿಲ್ಲೆಗಳು "ಸ್ಮಾರ್ಟ್ ಸಿಟಿ" ಯೋಜನೆಯಡಿಯಲ್ಲಿ ಆಯ್ಕೆಯಾಗಿವೆ; ಈ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ಪ್ರತಿ ಜಿಲ್ಲೆಗೆ ಮೀಸಲಿಟ್ಟ ಅನುದಾನವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)	ಸ್ಮಾರ್ಟ್ ಸಿಟಿ ಯೋಜನೆಯಡಿ ರಾಜ್ಯದ 7 ನಗರಗಳು ಆಯ್ಕೆಯಾಗಿರುತ್ತವೆ. ಸದರಿ ಯೋಜನೆಯಡಿ ಆಯ್ಕೆಯಾದ ಪ್ರತಿ ನಗರಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರವು ತಲಾ ರೂ.500.00 ಕೋಟಿ ಅನುದಾನವನ್ನು ಮೀಸಲಿಟ್ಟಿರುತ್ತದೆ.
ಆ	ಇದುವರೆಗೂ ಈ ಯೋಜನೆಗೆ ರಾಜ್ಯಕ್ಕೆ ಬಿಡುಗಡೆಯಾದ ಅನುದಾನವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)	ಸ್ಮಾರ್ಟ್ ಸಿಟಿ ಅಭಿಯಾನದಡಿ ಆಯ್ಕೆಯಾದ ರಾಜ್ಯದ 7 ನಗರಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಇದುವರೆವಿಗೂ ಬಿಡುಗಡೆಯಾದ ಅನುದಾನ ವಿವರಗಳು ಈ ಕೆಳಗಿನಂತಿವೆ; (see table below)

(ರೂ. ಕೋಟಿಗಳಲ್ಲಿ)

ನಗರ	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ	ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ
ಬೆಳಗಾವಿ	294	200
ದಾವಣಗೆರೆ	196	200
ಹುಬ್ಬಳ್ಳಿ-ಧಾರವಾಡ	196	190
ಮಂಗಳೂರು	196	148
ಶಿವಮೊಗ್ಗ	196	111
ತುಮಕೂರು	294	111
ಬೆಂಗಳೂರು.	194	55
ಒಟ್ಟು	**1566**	**1015**

ಕ್ರ. ಸಂ	ಪ್ರಶ್ನೆ	ಉತ್ತರ
ಇ	"ಸ್ಮಾರ್ಟ್ ಸಿಟಿ" ಯೋಜನೆಯು ಪೂರ್ಣಗೊಳ್ಳುವುದು ಯಾವಾಗ;	ಸ್ಮಾರ್ಟ್ ಸಿಟಿ ಅಭಿಯಾನದಡಿ ರಾಜ್ಯದ ನಗರಗಳು 3 ಹಂತದಲ್ಲಿ ಆಯ್ಕೆಯಾಗಿದ್ದು, 5 ವರ್ಷಗಳ ಯೋಜನಾ ಅವಧಿ ಹೊಂದಿರುತ್ತದೆ. ಅದರಂತೆ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು, ಯೋಜನಾ ಅನುಷ್ಠಾನಕ್ಕಾಗಿ ವಿಶೇಷ ಉದ್ದೇಶಿತ ವಾಹನವನ್ನು ಸ್ಥಾಪಿಸಲಾಗಿರುತ್ತದೆ. ಆಯ್ಕೆಯಾದ ವರ್ಷದ ಆಧಾರದಲ್ಲಿ ಆಯ್ಕೆಗೊಂಡ ಪ್ರತಿ ನಗರಕ್ಕೆ ಯೋಜನಾ ಅವಧಿಯು 5 ವರ್ಷಗಳಾಗಿದ್ದು, ಆಯಾ ನಗರಗಳು ಯೋಜನೆಯನ್ನು ಪೂರ್ಣಗೊಳಿಸಬೇಕಾದ ಕಾಲಮಿತಿ ಈ ಕೆಳಕಂಡಂತಿದೆ.

ಕ್ರ.ಸಂ	ನಗರಗಳು	ವಿಶೇಷ ಉದ್ದೇಶಿತ ವಾಹನ ಸ್ಥಾಪನೆ ದಿನಾಂಕ	ಯೋಜನೆ ಮುಕ್ತಾಯಗೊಳಿಸ ಬೇಕಾದ ವರ್ಷ/ದಿನಾಂಕ
1	ಬೆಳಗಾವಿ	11.05.2016	2021-22
2	ದಾವಣಗೆರೆ	19.05.2016	
3	ಹುಬ್ಬಳ್ಳಿ-ಧಾರವಾಡ	10.03.2017	2022-23
4	ಮಂಗಳೂರು	06.04.2017	
5	ಶಿವಮೊಗ್ಗ	07.02.2017	
6	ತುಮಕೂರು	06.02.2017	
7	ಬೆಂಗಳೂರು	03.01.2018	2023-24

ಈ	"ಸ್ಮಾರ್ಟ್ ಸಿಟಿ" ಯೋಜನೆಗೆ ಮುಂಬರುವ ದಿನಗಳಲ್ಲಿ ಇನ್ನಷ್ಟು ಜಿಲ್ಲೆಗಳನ್ನು ಸೇರಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ	ಸ್ಮಾರ್ಟ್ ಸಿಟಿ ಯೋಜನೆಯಡಿ ರಾಜ್ಯದ ಉಳಿದ 4 ಮಹಾನಗರ ಪಾಲಿಕೆಗಳಾದ ಮೈಸೂರು, ಕಲಬುರ್ಗಿ, ವಿಜಯಪುರ ಮತ್ತು ಬಳ್ಳಾರಿ ನಗರಗಳನ್ನು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ದಿನಾಂಕ:22-05-2020 ರಂದು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.
ಉ	ಇದ್ದಲ್ಲಿ ಯಾವ ಯಾವ ಜಿಲ್ಲೆಗಳನ್ನು ಸೇರಿಸುವ ಪ್ರಸ್ತಾಪವಿದೆ?	

ಸಂಖ್ಯೆ:ನಅಇ 43 ಸಿಎಸ್ಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1943
ಸದಸ್ಯರ ಹೆಸರು	:	ಶ್ರೀ ಭರತ್ ಶೆಟ್ಟಿ ವೈ. ಡಾ॥ (ಮಂಗಳೂರು ನಗರ ಉತ್ತರ)
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ	:	12.03.2021

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೋವಿಡ್–19ರ ನಂತರ ಕೈಗಾರಿಕೆ ಉದ್ಯಮವನ್ನು ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು);</td><td>ಕೋವಿಡ್–19 ಲಾಕ್‌ಡೌನ್ ಪರಿಣಾಮವಾಗಿ ತೀವ್ರ ಆರ್ಥಿಕ ಸಂಕಷ್ಟಕ್ಕೀಡಾಗಿರುವ ಕ್ಷೇತ್ರವನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಈ ಕೆಳಗಿನ ಕ್ರಮಗಳನ್ನು ಕೈಗೊಂಡಿರುತ್ತದೆ.

ಕರ್ನಾಟಕ ಸರ್ಕಾರದ ಪ್ಯಾಕೇಜ್

1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.

2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಠ ಮಿತಿ ರೂ.1 ಲಕ್ಷ. ಎಲ್‌ಟಿ ಗರಿಷ್ಠ ಮಿತಿ ರೂ.10,000/–

<table>
<tr><td>1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ</td><td>ಶೇ. 1 ರಿಯಾಯಿತಿ</td></tr>
<tr><td>6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ</td><td>ಶೇ. 0.5 ರಿಯಾಯಿತಿ</td></tr>
<tr><td>15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ</td><td>ಯಾವುದೇ ರಿಯಾಯಿತಿ ಇರುವುದಿಲ್ಲ</td></tr>
</table>

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.

4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಏಪ್ರಿಲ್ ಮತ್ತು ಮೇ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.</td></tr>
</table>

<table>
<tr>
<td></td>
<td></td>
<td>
<table>
<tr><td>ಏಪ್ರಿಲ್ 2020 ತಿಂಗಳ ಕಂತು</td><td>ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
<tr><td>ಮೇ 2020 ತಿಂಗಳ ಕಂತು</td><td>ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
<tr><td>ಜೂನ್ 2020 ತಿಂಗಳ ಕಂತು</td><td>ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
</table>
ಭಾರತ ಸರ್ಕಾರದ ಪ್ಯಾಕೇಜ್
ಭಾರತ ಸರ್ಕಾರವು "ಇ.ಸಿ.ಎಲ್.ಜಿ" – ಎರ್ಮಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು, ಇದರನ್ವಯ ಫೆಬ್ರವರಿ 2020ರ ಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ.20 ಹೆಚ್ಚುವರಿ ಸಾಲವನ್ನು ಯಾವುದೇ ಖಾತರಿ ಇಲ್ಲದೇ ನೀಡುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ.
ಇದರಡಿಯಲ್ಲಿ ಇದುವರೆಗೆ ಬ್ಯಾಂಕ್‌ಗಳು ನೀಡಿರುವ ಸಾಲದ ವಿವರಗಳು ಈ ಕೆಳಗಿನಂತಿವೆ.
<table>
<tr><th></th><th>ಒಟ್ಟು ಘಟಕಗಳು</th><th>ಒಟ್ಟು ಸಾಲದ ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>ಅರ್ಹವಿರುವ ಖಾತೆಗಳು</td><td>3,00,459</td><td>10,69,527</td></tr>
<tr><td>ಸಾಲ ಮಂಜೂರಾತಿ</td><td>2,03,014</td><td>8,02,953</td></tr>
<tr><td>ಸಾಲ ಬಿಡುಗಡೆ</td><td>1,46,409</td><td>6,66,116</td></tr>
</table>
</td>
</tr>
<tr>
<td>ಆ)</td>
<td>ದಕ್ಷಿಣ ಕನ್ನಡದಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಪ್ರಸ್ತುತ ಸಾಲಿನಲ್ಲಿ ಎಷ್ಟು ವಿಸ್ತೀರ್ಣದ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಸ್ವಾಧೀನಪಡಿಸಿಕೊಂಡಿದೆ;</td>
<td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಐಎಡಿಬಿ ವತಿಯಿಂದ ಪ್ರಸ್ತುತ ಸಾಲಿನಲ್ಲಿ 27.72 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.</td>
</tr>
<tr>
<td>ಇ)</td>
<td>ಭೂ ಸ್ವಾಧೀನಪಡಿಸಿಕೊಂಡ ವಿಸ್ತೀರ್ಣದ ಎಷ್ಟು ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ನೀಡಲಾಗಿದೆ (ವಿವರ ನೀಡುವುದು)?</td>
<td>ಮೇಲಿನಂತೆ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ದರ ನಿಗದಿಪಡಿಸಲು ಮತ್ತು ಪರಿಹಾರ ಪಾವತಿಸಲು ಬಾಕಿಯಿದ್ದು, ಸದರಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರದ ಕಾರಣ ಈ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ನೀಡಿರುವುದಿಲ್ಲ.</td>
</tr>
</table>

ಸಿಐ 100 ಎಸ್‌ಪಿಐ 2021

(ಜಗದೀಶ್ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1980
ಸದಸ್ಯರ ಹೆಸರು : ಶ್ರೀ ಹ್ಯಾರಿಸ್.ಎನ್.ಎ (ಶಾಂತಿನಗರ)
ಉತ್ತರಿಸುವ ದಿನಾಂಕ : 12.03.2021.
ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಮುಖ ಕಾರ್ಯವಿಧಾನಗಳು ಯಾವುವು:	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಮುಖ ಕಾರ್ಯಚಟುವಟಿಕೆಗಳು ಯಾವುವೆಂದರೆ ರಾಜ್ಯ ಸರ್ಕಾರ ಜನಸಾಮಾನ್ಯರಿಗೆ ಹಮ್ಮಿಕೊಳ್ಳುವ ವಿವಿಧ ಯೋಜನೆಗಳ ಬಗ್ಗೆ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡುವುದು, ಸರ್ಕಾರದ ಅಭಿವೃದ್ಧಿ ಯೋಜನೆಗಳ ಕುರಿತು ಬಸ್ ಬ್ರ್ಯಾಂಡಿಂಗ್ ಮತ್ತು ರೈಲು ಬ್ರ್ಯಾಂಡಿಂಗ್, ಸರ್ಕಾರದ ಅಭಿವೃದ್ಧಿ ಯೋಜನೆಗಳ ಕುರಿತು ಪ್ರಮುಖ ಜಾತ್ರೆಗಳಲ್ಲಿ ವಸ್ತು ಪ್ರದರ್ಶನ ಮಳಿಗೆಗಳನ್ನು ಏರ್ಪಡಿಸುವುದು, ಗಣರಾಜ್ಯೋತ್ಸವ ಸಂದಂರ್ಭದಲ್ಲಿ ಸ್ತಬ್ಧಚಿತ್ರ ನಿರ್ಮಾಣ ಮಾಡಿ ಪೆರೇಡ್ ನಲ್ಲಿ ಭಾಗವಹಿಸುವುದು.
(ಆ)	ಸರ್ಕಾರದ ವಿವಿಧ ಯೋಜನೆಗಳ ಕುರಿತಾದ ವಿವರಗಳು ಮತ್ತು ಉಪಯುಕ್ತತೆಗಳನ್ನು ಸಾರ್ವಜನಿಕರು/ ಜನಸಾಮಾನ್ಯರು ಮತ್ತು ವಿಶೇಷತ: ಗ್ರಾಮಾಂತರಗಳಲ್ಲಿರುವ ಫಲಾನುಭವಿಗಳಿಗೆ ತಲುಪಿಸುವಲ್ಲಿ ಅರಿವಿನ ನೆರವು ನೀಡುವ ಕುರಿತು ಇಲಾಖೆಯ ಪರಿಣಾಮಕಾರಿ ಕ್ರಮಗಳೇನು;	ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಕುರಿತು ಜನಸಾಮಾನ್ಯರಿಗೆ ಸುದ್ದಿ ರೂಪದಲ್ಲಿ ಹಾಗೂ ಜಾಹೀರಾತು ರೂಪದಲ್ಲಿ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಅರಿವು ಮೂಡಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಬೀದಿ ನಾಟಕಗಳ ಮೂಲಕ ಫಲಾನುಭವಿಗಳಿಗೆ ಅರಿವು ಮೂಡಿಸುವುದು, ಪ್ರಮುಖ ಜಾತ್ರೆಗಳಲ್ಲಿ ವಸ್ತುಪ್ರದರ್ಶನ ಮಳಿಗೆ ನಿರ್ಮಿಸಿ, ಮಾಹಿತಿ ನೀಡುವುದು, ಬಸ್ ಬ್ರ್ಯಾಂಡಿಂಗ್ ಮತ್ತು ರೈಲು ಬ್ರ್ಯಾಂಡಿಂಗ್ ಮೂಲಕ ಸರ್ಕಾರದ ಯೋಜನೆಗಳ ಅರಿವು ಮೂಡಿಸುವ ಕಾರ್ಯ ನಿರ್ವಹಿಸುತ್ತಿದೆ.
(ಇ)	ಗ್ರಾಮಾಂತರ ಪ್ರದೇಶಗಳು ಸೇರಿದಂತೆ ಯೋಜನಾ ಫಲಾನುಭವಿಗಳಿಗೆ ಸರ್ಕಾರದ ಯೋಜನೆಗಳ ಅರಿವು ಮತ್ತು ಅವುಗಳನ್ನು ಪಡೆದುಕೊಳ್ಳುವಲ್ಲಿನ ಅರ್ಹತಾ ನಿಯಮಗಳನ್ನು ತಿಳಿಸುವ ಮಹತ್ಕಾರ್ಯವನ್ನು ಸರ್ಕಾರ ಯಾವ ರೀತಿಯಲ್ಲಿ ಜಾರಿಗೊಳಿಸುತ್ತಿದೆ;	ಸರ್ಕಾರದ ಯೋಜನೆಗಳ ಅರಿವು ಮತ್ತು ಅವುಗಳನ್ನು ಪಡೆದುಕೊಳ್ಳುವಲ್ಲಿ ಅರ್ಹತಾ ನಿಯಮಗಳನ್ನು ಇಲಾಖೆ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಮೂಲಕ, ಸುದ್ದಿ ಮತ್ತು ಜಾಹೀರಾತು ರೂಪದಲ್ಲಿ ಎಲ್.ಇ.ಡಿ. ವಾಹನಗಳು ಹಾಗೂ ಬೀದಿ ನಾಟಕಗಳ ಮೂಲಕ ಪ್ರಚಾರ ಮಾಡಿ ಗ್ರಾಮಾಂತರ ಪ್ರದೇಶಗಳೂ ಸೇರಿದಂತೆ ಯೋಜನಾ ಫಲಾನುಭವಿಗಳಲ್ಲಿ ಅರಿವು ಮೂಡಿಸುತ್ತಿದೆ.

2...

(ಈ)	ವಿವಿಧ ಮಾಧ್ಯಮಗಳ ಮೂಲಕ ಪ್ರಚಾರದ ಹಾಗೂ ಇಲಾಖೆಯ ವ್ಯಾಪ್ತಿಯಲ್ಲಿಯೇ ಯೋಜನೆಗಳನ್ನು ಪಡೆಯುವಲ್ಲಿನ ಅರಿವು ನೀಡಿಕೆ ಕುರಿತು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆಯೇ?	ವಿವಿಧ ಮಾಧ್ಯಮಗಳ ಮೂಲಕ ಪ್ರಚಾರದ ಹಾಗೂ ಇಲಾಖೆಯ ವ್ಯಾಪ್ತಿಯಲ್ಲಿಯೇ ಯೋಜನೆಗಳನ್ನು ಪಡೆಯುವಲ್ಲಿನ ಅರಿವು ನೀಡಿಕೆ ಕುರಿತು ಕಾಲಕಾಲಕ್ಕೆ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ.

KCI-PIP/67/2021-INFO-KC-SEC

(ಸಿ.ಸಿ.ಪಾಟೀಲ್)
ಮಾನ್ಯ ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1730
ಸದಸ್ಯರ ಹೆಸರು	ಶ್ರೀ ಸುರೇಶ್ ಗೌಡ
ಉತ್ತರಿಸಬೇಕಾದ ದಿನಾಂಕ	12.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ನಾಗಮಂಗಲ ತಾಲ್ಲೂಕಿನ ಹೊಣಕೆರೆ ಹೋಬಳಿ, ಕೆಂಪನಕೊಪ್ಪಲು ಗ್ರಾಮದ ವ್ಯಾಪ್ತಿಯಲ್ಲಿ ಎಷ್ಟು ವರ್ಷಗಳಿಂದ ಎಷ್ಟು ವರ್ಷಗಳವರೆಗೆ ಪರವಾನಿಗೆ ಪಡೆದ ಎಷ್ಟು ಕಂಪನಿಗಳು ಕಲ್ಲುಗಣಿಗಾರಿಕೆ ನಡೆಸುತ್ತಿವೆ; (ಸಂಪೂರ್ಣ ವಿವರ ನೀಡುವುದು)	ನಾಗಮಂಗಲ ತಾಲ್ಲೂಕು, ಹೊಣಕೆರೆ ಹೋಬಳಿ, ಕೆಂಪನಕೊಪ್ಪಲು ಗ್ರಾಮದ ವ್ಯಾಪ್ತಿಯಲ್ಲಿ ಯಾವುದೇ ಕಲ್ಲುಗಣಿ ಗುತ್ತಿಗೆ ಮಂಜೂರಾಗಿರುವುದಿಲ್ಲ. ಆದರೆ ಸದರಿ ಗ್ರಾಮದ ಸುತ್ತ ಇರುವ ಎ.ಶ್ಯಾನುಭೋಗನಹಳ್ಳಿ ಮತ್ತು ಇಜ್ಜಲಘಟ್ಟ ಗ್ರಾಮಗಳಲ್ಲಿ 02 ಕಲ್ಲುಗಣಿ ಗುತ್ತಿಗೆಗಳಿಗೆ ಪರವಾನಿಗೆ ನೀಡಲಾಗಿರುತ್ತದೆ, **ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.**
ಆ)	ಈ ಕಂಪನಿಗಳು ಇಲ್ಲಿಯವರೆಗೂ ಎಷ್ಟು ಪ್ರಮಾಣದ ಖನಿಜ ಸಂಪತ್ತನ್ನು ತೆಗೆದುಕೊಂಡಿವೆ; ಅದಕ್ಕೆ ಎಷ್ಟು ರಾಜಧನ ನೀಡಬೇಕಾಗಿರುತ್ತದೆ; ಎಷ್ಟು ರಾಜಧನ ಬಂದಿದೆ; (ವಿವರ ನೀಡುವುದು)	ಶ್ರೀ ಸಿ.ಕೆ.ದೇವರಾಜು ಇವರು ಹೊಂದಿರುವ ಕಲ್ಲುಗಣಿ ಗುತ್ತಿಗೆ ಸಂಖ್ಯೆ 627ರಲ್ಲಿ, 64300 ಮೆಟ್ರಿಕ್ ಟನ್ ನಷ್ಟು ಕಟ್ಟಡ ಕಲ್ಲನ್ನು ತೆಗೆದಿದ್ದು, ಇದಕ್ಕೆ 2019-20ನೇ ಸಾಲಿನವರೆಗೆ **ರೂ.60,54,977/-**ಗಳ ರಾಜಧನ ಪಾವತಿಸಬೇಕಾಗಿದ್ದು, ಈ ಪೈಕಿ ಒಟ್ಟು **ರೂ.13,38,569/-** ಗಳನ್ನು ಪಾವತಿಸಿರುತ್ತಾರೆ. ಶ್ರೀ ಇ.ಎನ್.ಉಮೇಶ್ ಇವರು ಹೊಂದಿರುವ ಕಲ್ಲುಗಣಿ ಗುತ್ತಿಗೆ ಸಂಖ್ಯೆ 1076 ರಲ್ಲಿ, 6300 ಮೆಟ್ರಿಕ್ ಟನ್ ನಷ್ಟು ಖನಿಜ ಸಂಪತ್ತನ್ನು ಗಣಿಗಾರಿಕೆ ನಡೆಸಿ ಸಾಗಾಣಿಕೆ ಮಾಡಿದ್ದು, ಇದಕ್ಕೆ 2019-20ನೇ ಸಾಲಿನವರೆಗೆ **ರೂ.5,18,631/-** ರಾಜಧನ ಪಾವತಿಸಬೇಕಾಗಿದ್ದು, ಈ ಪೈಕಿ ಒಟ್ಟು **ರೂ.4,50,000/-** ರಾಜಧನ ಪಾವತಿಸಿರುತ್ತಾರೆ.
ಇ)	ಇದುವರೆವಿಗೂ ರಾಜಧನ ಪಾವತಿಸದೆ ಇರುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)	ಸದರಿ ಇಬ್ಬರು ಕಲ್ಲುಗಣಿ ಗುತ್ತಿಗೆದಾರರು ಉಳಿಸಿಕೊಂಡಿರುವ ಬಾಕಿಯನ್ನು ಪಾವತಿಸುವಂತೆ ನಿಯಮಾನುಸಾರ ನೋಟೀಸ್ ಜಾರಿ ಮಾಡಿ, ಬಾಕಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ ಸಿಐ 135 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

1730

ಅನುಬಂಧ-1

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಎ.ಶ್ಯಾನುಭೋಗನಹಳ್ಳಿ ಮತ್ತು ಇಜ್ಜಲಘಟ್ಟ ಗ್ರಾಮದಲ್ಲಿ ಮಂಜೂರು ಮಾಡಿರುವ ಕಟ್ಟಡ ಕಲ್ಲುಗಣಿ ಗುತ್ತಿಗೆಗಳ ವಿವರ

ಕ್ರ. ಸಂ	ಕಲ್ಲುಗಣಿ ಗುತ್ತಿಗೆದಾರರ ಹೆಸರು ಮತ್ತು ವಿಳಾಸ	ಕ.ಗ.ಗು .ಸಂ	ತಾಲ್ಲೂಕು	ಗ್ರಾಮ.	ಸ. ನಂ	ವಿಸ್ತೀರ್ಣ	ಜಮೀನಿನ ವಿವರ	ಖನಿಜದ ವಿವರ	ಮಂಜೂರಾದ ದಿನಾಂಕ ಮತ್ತು ಅವಧಿ, ಮುಕ್ತಾಯ ದಿನಾಂಕ
1	ಶ್ರೀ ಸಿ.ಕೆ. ದೇವರಾಜು ಬಿನ್ ಕಾಳೇಗೌಡ ಶ್ರೀ ಭೈರವ ನಿಲಯ ನಂ 4600 22ನೇ ಕ್ರಾಸ್, ವಿ.ವಿ.ನಗರ. ಕಲ್ಲಹಳ್ಳಿ ಮಂಡ್ಯ ಟೌನ್	627	ನಾಗಮಂಗಲ	ಎ.ಶ್ಯಾನುಭೋಗ ನಹಳ್ಳಿ	18	5-00	ಸರ್ಕಾರಿ ಗೋಮಾಳ	ಕಟ್ಟಡದ ಕಲ್ಲು	01/08/2003, 20 ವರ್ಷ, 31/07/2023
2	ಇ.ಎನ್.ಉಮೇಶ್ ಬಿನ್ ನಾರಾಯಣಗೌಢ ನಂ 58 ಇಜ್ಜಲಘಟ್ಟ ಗ್ರಾಮ ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆ	1076	ನಾಗಮಂಗಲ	ಇಜ್ಜಲಘಟ್ಟ	41	1-10	ಪಟ್ಟಾಭೂಮಿ	ಕಟ್ಟಡದ ಕಲ್ಲು	22/02/2019, 20 ವರ್ಷ, 20/02/2039

135
CI mmn 2021

Deputy Director (Min. Admn)
Dept. of Mines & Geology
Bangalore-560001

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1744
ಸದಸ್ಯರ ಹೆಸರು	ಶ್ರೀ ಖಾದರ್ ಯು.ಟಿ.
ಉತ್ತರಿಸಬೇಕಾದ ದಿನಾಂಕ	12.03.2021.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಗೆ ಡಿ.ಎಂ.ಎಫ್. ಖಾತೆಯಲ್ಲಿ ಅನುದಾನ ಲಭ್ಯವಿದ್ದರೂ ಉದ್ದೇಶಿತ ಕಾಮಗಾರಿಗೆ ವಿನಿಯೋಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿಯೇ;	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿಯಲ್ಲಿ 2016-17 ರಿಂದ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಸಂಗ್ರಹಿಸಲಾಗುತ್ತಿದ್ದು, 2020-21ನೇ ಸಾಲಿನ ಜನವರಿ 2021ರ ಅಂತ್ಯದವರೆಗೆ ಒಟ್ಟು ರೂ.857.53 ಲಕ್ಷಗಳನ್ನು ಸಂಗ್ರಹಿಸಲಾಗಿದೆ. ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ (PMKKKY) ರಲ್ಲಿ ಉದ್ಧೇಶಿತ ಯೋಜನೆಗಳಿಗೆ ರೂ. 165.50 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಅನುಮೋದಿಸಿದ್ದು, ಒಟ್ಟು 52 ಕಾಮಗಾರಿಗಳನ್ನು ಹಮ್ಮಿಕೊಂಡು ರೂ.126.49 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ.
ಆ)	ಬಂದಿದ್ದಲ್ಲಿ, ಉದ್ದೇಶಿತ ಕಾಮಗಾರಿಗೆ ಅನುದಾನ ಹಂಚಿಕೆ ಮಾಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು (ವಿವರ ನೀಡುವುದು)	ಕಂಡಿಕೆ (ಅ) ರಲ್ಲಿ ವಿವರಿಸಿರುವಂತೆ, ಈಗಾಗಲೇ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ PMKKKY ಉದ್ದೇಶಿತ ಯೋಜನೆಗಳಿಗೆ ಕ್ರಿಯಾ ಯೋಜನೆಯನ್ನು ಅನುಮೋದಿಸಿದ್ದು, ಕಾಮಗಾರಿಗಳ ವಿವರಗಳನ್ನು **ಅನುಬಂಧದಲ್ಲಿ ನೀಡಲಾಗಿದೆ.**

ಸಂಖ್ಯೆ ಸಿಐ 138 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)

ಗಣಿ ಮತ್ತು ಭೂವಿಜ್ಞಾನ ಸಚಿವರು.

1744

ಅನುಬಂಧ

ರೂ.ಲಕ್ಷಗಳಲ್ಲಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಣಿಗಾರಿಕೆಯಿಂದ ಬಾಧಿತ ಪ್ರದೇಶಗಳಲ್ಲಿ ಕೈಗೊಂಡ ಕಾಮಗಾರಿಗಳ ವಿವರ

ಕ್ರ.ಸಂ	ಕಾಮಗಾರಿ ವಿವರ	ಯೋಜನೆ	ತಾಲ್ಲೂಕು	ಗ್ರಾಮ	ಅನುಮೋದಿತ ಕ್ರಿಯಾಯೋಜನೆಯ ಮೊತ್ತ	ಖರ್ಚಾದ ಮೊತ್ತ	ಕಾಮಗಾರಿ ಹಂತ
1	Providing Pure drinking water unit to D.K.Z.P. Higher Primary school, at Babankatte of Ananthadya village	Drinking water Supply	Bantwal	Ananthady	1.00	0.99	Completed
2	Drinking Water Facility:- Rajapalke(Borewell & Pipe Line Facility)	Drinking water Supply	Bantwal	Kavala Padoor	1.50	0.00	Under Progress
3	Drinking Water Facility for 12 Kavalu(Arambodi).	Drinking water Supply	Belthangady	Arambodi	1.50	1.50	Completed
4	Water Tank For Machina Govt. High School.	Drinking water Supply	Belthangady	Machina	2.00	0.00	Under Progress
5	Borewell Facility to Parladi S.T Colony	Drinking water Supply	Mangalore	Kadandale	1.50	0.00	Yet to Start
6	Borewell Facility to Malavoor grama Panchayath	Drinking water Supply	Mangalore	Kadandale	2.50	0.00	Under Progress
7	Borewell Facility & Water Supply Facility:- Goliyadka Markanja G.P	Drinking water Supply	Sullia	Markanja	1.50	1.50	Completed
8	Providing Drinking water supply at Goliyadka Anganavadi in Markanja G.P	Drinking water Supply	Sullia	Markanja	1.50	1.50	Completed
9	Water Facility of Thumbe village	Drinking water Supply	Bantwal	Thumbe	1.50	0.00	Under Progress
10	Repair work to D.K.Z.P. Lower Primary school, at Kilinja of Veerakamba village	Education	Bantwal	Veerakamba	2.50	2.50	Completed
11	Repairs of building at Govt Higher primary school Goliyadka Mudnoor Markanja in Markanja G.p	Education	Sullia	Markanja	2.00	2.00	Completed
12	Public Toilet for Perlapu Near Rama Mandira Temple.	Sanitation	Bantwal	Kadeshivalaya	0.50	0.50	Completed
13	Repair work to D.K.Z.P. Higher Primary school,and Toilet at Pallipady of Kariyangala village	Sanitation	Bantwal	Kariyangala	2.50	0.00	Under Progress
14	Repair work to Government High school Building and Toilet at Kariyangala village	Sanitation	Bantwal	Kariyangala	2.00	0.00	Under Progress
15	Drainage Facility from Karinja to Rajapalke Road, in Kavala padoor	Sanitation	Bantwal	Kavala Padoor	2.00	0.00	Under Progress
16	Repair work to D.K.Z.P. Lower Primary school,and Toilet at Bayila of Veerakamba village	Sanitation	Bantwal	Veerakamba	2.50	2.50	Completed
17	Repair work to D.K.Z.P. Lower Primary school,and Toilet at Veerakamba village	Sanitation	Bantwal	Veerakamba	2.50	2.50	Completed
18	Drainage Facility:- Kalleripete, of Thannirupantha village	Sanitation	Belthangady	Thanneerpantha	4.00	4.00	Completed
19	Public Toilet:- Macchina Bus Stand	Sanitation	Belthangady	Macchina	2.00	0.00	Under Progress
20	Drainage facility for Perlapu Cluister .	Sanitation	Belthangady	Ilanthila	4.00	4.00	Completed
21	Public Toilet to Armbody village	Sanitation	Belthangady	Arambodi	1.50	1.50	Completed
22	Nodaje Road	Physical Infrastructure	Bantwal	Amtady	3.00	3.00	Completed
23	Road Development in Kukkuri To Papudadka-Kuriyala Village,	Physical Infrastructure	Bantwal	Amtady	3.50	3.50	Completed
24	Nalkemar Road,	Physical Infrastructure	Bantwal	Amtady	3.00	3.00	Completed
25	Road Repair Work from Babankatte road to Kombilakatte	Physical Infrastructure	Bantwal	Ananthady	5.00	0.00	Under Progress
26	Road Repair Gujiruku to Tharigudi	Physical Infrastructure	Bantwal	Kadeshivalaya	5.00	5.00	Completed
27	Muchila to Nejinadka Road Repair	Physical Infrastructure	Bantwal	Kadeshivalaya	3.00	0.00	Under Progress
28	Road Repair Work from Kariyangala to Punchame-	Physical Infrastructure	Bantwal	Kariyangala	5.00	5.00	Completed
29	Road Development :- Nethravathi Road of Thumbe village	Physical Infrastructure	Bantwal	Thumbe	4.00	4.00	Completed
30	Mallikodi Road of Thumbe village	Physical Infrastructure	Bantwal	Thumbe	4.00	4.00	Completed
31	Road Development : Paraneeru of Thumbe village	Physical Infrastructure	Bantwal	Thumbe	4.00	0.00	Yet to Start
32	Berva Road of Thumbe village	Physical Infrastructure	Bantwal	Thumbe	5.00	5.00	Completed
33	Maji Road of Thumbe village	Physical Infrastructure	Bantwal	Thumbe	5.00	5.00	Completed
34	Road Development from Bayla to Deremaaru in Veera Kamba Village	Physical Infrastructure	Bantwal	Veerakamba	5.00	5.00	Completed
35	Road Development from Ukkuda Road to Branapade	Physical Infrastructure.	Bantwal	Vitla Town Panchayath	3.00	0.00	Under Progress
36	Road Development :Gandibagilu-Nayimaaru	Physical Infrastructure	Belthangady	Ilanthila	5.00	5.00	Completed
37	Road Development: Kalleri Janatha Colony, of Thannirupantha village	Physical Infrastructure	Belthangady	Thannirupantha	4.00	4.00	Completed
38	Road Development: Karaya Janatha Colony of Thannirupantha village	Physical Infrastructure	Belthangady	Thannirupantha	5.00	5.00	Completed
39	Road Repair Work:- Adyar Padavu	Physical Infrastructure	Mangalore	Adyar	5.00	5.00	Completed

40	Road Development:- Gurimajalu Road -Iruvailu Village	Physical Infrastructure	Mangalore	Iruvailu	5.00	5.00	Completed
41	Paladka Village Gundyadka Kallasanka Road	Physical Infrastructure	Mangalore	Kadandale	2.50	2.50	Completed
42	Poyyodi Road of Kallamundkuru village	Physical Infrastructure	Mangalore	Kallamundkuru	5.00	5.00	Completed
43	Road Development & Street Light from Kaudur Katte PWD Road to Kaudur Site-	Physical Infrastructure	Mangalore	Kolambe	5.00	5.00	Completed
44	Road Development: Bangerapadavu-Kolatharu-Manjanabailu	Physical Infrastructure	Mangalore	Niddodi	5.00	5.00	Completed
45	Road Development:- Bangerapadavu Near Govt Well	Physical Infrastructure	Mangalore	Niddodi	2.50	2.50	Completed
46	Road Development:-Palkehithu	Physical Infrastructure	Mangalore	Niddodi	2.50	2.50	Completed
47	Road Development from Puthige to Kukkudaguri Road,	Physical Infrastructure	Mangalore	Puthige	5.00	5.00	Completed
48	Road Repair Work from Ashwatha Pura-Kondebettu-Pidamale-Manjanabailu.	Physical Infrastructure	Mangalore	Edapadavu	5.00	5.00	Completed
49	Road Repair Work from Kulavuru-Dhumavathi Dhaivasthana Road	Physical Infrastructure	Mangalore	Kulavoor	2.00	0.00	Under Progress
50	Development of Road at Goliyadka -Pura - Minanguru in Markanja G.P	Physical Infrastructure	Sullia	Markanja	2.50	2.50	Completed
51	Providing wooden Panels and Repair work to Vented dam at Gilkinja of Veerkamba village	Irrigation	Bantwal	Veerakamba	2.50	0.00	Yet to Start
52	Providing wooden Panels and Repair work to Vented dam near Chandunalike house of Kariyangala village	Irrigation	Bantwal	Veerakamba	2.00	0.00	Under Progress
	ಒಟ್ಟು				165.50	126.49	

CI 146 MMN 2021

ನಿರ್ದೇಶಕರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1749
ಸದಸ್ಯರ ಹೆಸರು	ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್
ಉತ್ತರಿಸಬೇಕಾದ ದಿನಾಂಕ	12.03.2021.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ)	ರಾಜ್ಯಾದ್ಯಂತ ವ್ಯವಸ್ಥಿತ ಮರಳು ನೀತಿಯು ಅನುಷ್ಠಾನವಾಗದ ಕಾರಣ ಮರಳಿನ ಕೊರತೆಯಿಂದ ಸಾರ್ವಜನಿಕರ ಮತ್ತು ಸರ್ಕಾರದ ನಿರ್ಮಾಣ ಕಾಮಗಾರಿಗಳಿಗೆ ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿ ಸಾರ್ವಜನಿಕ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಅಲ್ಪ ಪ್ರಮಾಣದಲ್ಲಿ ಮರಳಿನ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಹಾಗಿದ್ದಲ್ಲಿ, ಸಾರ್ವಜನಿಕರ ಮತ್ತು ಸರ್ಕಾರದ ನಿರ್ಮಾಣ ಕಾಮಗಾರಿಗಳಿಗೆ ಮರಳಿನ ಕೊರತೆ ನೀಗಿಸಲು ಸರ್ಕಾರವು ಯಾವ ಕ್ರಮ ಜರುಗಿಸಿದೆ;	ರಾಜ್ಯದಲ್ಲಿ ಸಾರ್ವಜನಿಕರಿಗೆ ಅಗತ್ಯವಿರುವ ಮರಳನ್ನು ಪೂರೈಸಲು ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ಕ್ಕೆ ತಿದ್ದುಪಡಿ ತಂದು (ತಿದ್ದುಪಡಿ) ನಿಯಮಗಳು, 2016ನ್ನು ಜಾರಿಗೊಳಿಸಿರುತ್ತದೆ. ಅದರ ಪ್ರಮುಖಾಂಶಗಳು ಈ ಕೆಳಕಂಡಂತಿವೆ; • ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-T ರಂತೆ ಟೆಂಡರ್ ಕಂ–ಇ–ಹರಾಜು ಮೂಲಕ ನದಿ ಪಾತ್ರಗಳಲ್ಲಿನ ಮರಳು ಬ್ಲಾಕುಗಳನ್ನು ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. • ಅದರಂತೆ, ಪ್ರಸ್ತುತ ರಾಜ್ಯದಲ್ಲಿ 248 ಮರಳು ಬ್ಲಾಕುಗಳನ್ನು ಟೆಂಡರ್–ಕಂ–ಹರಾಜು ಮೂಲಕ ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. • ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-ZA ರಂತೆ 82 ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆ ಲೈಸನ್ಸ್ ನೀಡಲಾಗಿರುತ್ತದೆ.

---2

		• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-ZB ರಂತೆ ಕರಾವಳಿ ನಿಯಂತ್ರಣ ವಲಯ ಪ್ರದೇಶಗಳ ನದಿ ಪಾತ್ರಗಳಲ್ಲಿ 34 ಮರಳು ದಿಬ್ಬಗಳಲ್ಲಿ ಮರಳು ತೆಗೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. • ರಾಜ್ಯದಲ್ಲಿ ಎಂ-ಸ್ಯಾಂಡ್ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುತ್ತಿದ್ದು, ಪ್ರಸ್ತುತ 289 ಎಂ-ಸ್ಯಾಂಡ್ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಘಟಕಗಳಿಂದ ರಾಜ್ಯದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಉತ್ಪಾದಿತ ಮರಳು ಪೂರೈಕೆಯಾಗುತ್ತಿರುತ್ತದೆ. • ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2017 ರ ನಿಯಮ 31-ZF ರಂತೆ, ವಿದೇಶದಿಂದ ಮರಳು ಆಮದು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. • ನದಿ ಪಾತ್ರಗಳ ಪಕ್ಕದ ಕೃಷಿ ಜಮೀನುಗಳಲ್ಲಿ ಪ್ರವಾಹದಿಂದ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸಿ ಕೃಷಿ ಯೋಗ್ಯ ಭೂಮಿಯಾಗಿ ಪರಿವರ್ತಿಸಲು ಕೃಷಿ ಜಮೀನು ಮಾಲೀಕರುಗಳಿಗೆ ಸದರಿ ಮರಳನ್ನು ತೆಗೆದು ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. • ಮುಂದುವರೆದು, ದಿನಾಂಕ 05.05.2020 ರಂದು ಹೊಸ ಮರಳು ನೀತಿ, 2020 ನ್ನು ಜಾರಿಗೆ ತಂದಿದ್ದು, ಸದರಿ ಮರಳು ನೀತಿಯಂತೆ, I, II & III ನೇ ಶ್ರೇಣಿಯ ಹಳ್ಳ/ ತೊರೆಗಳಲ್ಲಿ ಹಾಗೂ ಕೆರೆಗಳಲ್ಲಿ ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯಿತಿಗಳ ಮೂಲಕ ವಿಲೇವಾರಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. • ಅದರಂತೆ, ಪ್ರಸ್ತುತ 193 ಮರಳು ನಿಕ್ಷೇಪದ ಪ್ರದೇಶಗಳನ್ನು ಗುರುತಿಸಲಾಗಿದ್ದು, ಈ ಪೈಕಿ 87 ಬ್ಲಾಕ್ ಗಳಿಗೆ ಅಧಿಸೂಚನೆ ಹೊರಡಿಸಿ ಕಾರ್ಯಾದೇಶ ನೀಡಲಾಗಿರುತ್ತದೆ. • IV, V & VI ನೇ ಶ್ರೇಣಿಯ ಹೊಳೆ / ನದಿಗಳಲ್ಲಿ ಅಣೆಕಟ್ಟು / ಜಲಾಶಯ / ಬ್ಯಾರೇಜ್ ಹಾಗೂ ಅಣೆಕಟ್ಟಿನ ಹಿನ್ನೀರಿನ ಪ್ರದೇಶದಲ್ಲಿ ಲಭ್ಯವಿರುವ ಮರಳನ್ನು ತೆಗೆಯಲು ಸರ್ಕಾರಿ ಸ್ವಾಮದ ಸಂಸ್ಥೆಗಳಾದ ಮೆ॥ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ (KSMCL) ಮತ್ತು ಮೆ॥ ಹಟ್ಟಿ ಚಿನ್ನದ ಗಣಿ (HGML) ನಿಯಮಿತ ಇವರಿಗೆ ವಹಿಸಲಾಗಿರುತ್ತದೆ.

--3

1749

		• ಅದರಂತೆ, ಪ್ರಸ್ತುತ ಮೆ॥ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ ಇವರಿಗೆ 46 ಹಾಗೂ ಮೆ॥ ಹಟ್ಟಿ ಚಿನ್ನದ ಗಣಿ ನಿಯಮಿತ ಇವರಿಗೆ 43 ಮರಳು ಬ್ಲಾಕ್ ಗಳಲ್ಲಿ ಮರಳು ಗಣಿಗಾರಿಕೆ ನಡೆಸಲು ಆಯಾ ಜಿಲ್ಲಾ ಮರಳು ಸಮಿತಿಗಳಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ.
ಇ)	ಸಾರ್ವಜನಿಕರು ತಮ್ಮ ಸ್ವಂತ ಮನೆ ನಿರ್ಮಿಸಿಕೊಳ್ಳಲು ತಮ್ಮ ಜಮೀನು ಅಥವಾ ಸಮೀಪದ ಹಳ್ಳ ಕೊಳ್ಳದಲ್ಲಿ ಮರಳು ತೆಗೆದು ಸಾಗಾಣೆ ಮಾಡಲು ಸರ್ಕಾರ ಯಾವ ನಿಯಮ ರೂಪಿಸಿದೆ?	• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-ZA ರಂತೆ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆ ಲೈಸನ್ಸ್ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. • ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಹೊರಡಿಸಿರುವ ಸುಸ್ಥಿರ ಮರಳು ಗಣಿಗಾರಿಕೆ ಮಾರ್ಗಸೂಚಿಗಳು, 2016 ರಂತೆ, ನದಿ ಪಾತ್ರಗಳ ಪಕ್ಕದ ಕೃಷಿ ಜಮೀನುಗಳಲ್ಲಿ ಪ್ರವಾಹದಿಂದ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸಿ ಕೃಷಿ ಯೋಗ್ಯ ಭೂಮಿಯಾಗಿ ಪರಿವರ್ತಿಸಲು ಕೃಷಿ ಜಮೀನು ಮಾಲೀಕರುಗಳಿಗೆ ಸದರಿ ಮರಳನ್ನು ತೆಗೆದು ಬಳಸಿಕೊಳ್ಳಲು ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿದೆ. • ಅಲ್ಲದೆ, ದಿನಾಂಕ 05.05.2020 ರಂದು ಹೊಸ ಮರಳು ನೀತಿ, 2020 ನ್ನು ಜಾರಿಗೆ ತಂದಿದ್ದು, ಸದರಿ ಮರಳು ನೀತಿಯಂತೆ, I, II & III ನೇ ಶ್ರೇಣಿಯ ಹಳ್ಳ / ತೊರೆಗಳಲ್ಲಿ ಹಾಗೂ ಕೆರೆಗಳಲ್ಲಿ ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯಿತಿಗಳ ಮೂಲಕ ಸ್ಥಳೀಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಸಂಖ್ಯೆ ಸಿಐ 141 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1758
ಸದಸ್ಯರ ಹೆಸರು : ಶ್ರೀ ಬಸವನಗೌಡ ದದ್ದಲ್ಲ (ರಾಯಚೂರು ಗ್ರಾಮಾಂತರ)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 12.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯಲ್ಲಿ ಇದುವರೆವಿಗೂ ಎಷ್ಟು ಕೆಮಿಕಲ್ ಕಾರ್ಖಾನೆಗಳನ್ನು ಸ್ಥಾಪಿಸಲು ಯಾವ ಯಾವ ಸಂಸ್ಥೆಗಳಿಗೆ (ಯಾವ ವರ್ಷದಲ್ಲಿ) ಪರವಾನಗಿಯನ್ನು ನೀಡಲಾಗಿದೆ; (ವಿವರ ನೀಡುವುದು)	ರಾಯಚೂರು ಜಿಲ್ಲೆಯಲ್ಲಿ 15 ಕೆಮಿಕಲ್ ಕಾರ್ಖಾನೆಗಳು ಇರುತ್ತವೆ ಮತ್ತು ಸದರಿ ಕಾರ್ಖಾನೆಗಳಿಗೆ ಪರವಾನಗಿ ನೀಡಿದ ವರ್ಷಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.
